# ಕರ್ನಾಟಕ ವಿಧಾನ ಪರಿಷತ್ತು
## (ಶೂನ್ಯ ವೇಳೆ ಪ್ರಸ್ತಾವನೆ)

ಶ್ರೀ ವೈ ಎಂ ಸತೀಶ್, ಮಾನ್ಯ ಶಾಸಕರು, ಕರ್ನಾಟಕ ವಿಧಾನ ಪರಿಷತ್ತು, ಇವರು ರಾಜ್ಯದಲ್ಲಿ ಅಂಗವಿಕಲರಿಗೆ ನೀಡಲಾಗುವ ಗುರುತಿನ ಚೀಟಿಗಳನ್ನು ನೀಡುತ್ತಿರುವ ಆರೋಗ್ಯ ಇಲಾಖೆಯಲ್ಲಿನ ಲೋಪಗಳ ಕುರಿತು ಇಂದಿನ ದಿನಪತ್ರಿಕೆಗಳಲ್ಲಿ ವರದಿಯಾಗಿದ್ದು, ಹಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಅಂಗವಿಕಲ ಗುರುತಿನ ಪತ್ರವನ್ನು ನೀಡುವ ಸಂದರ್ಭಗಳಲ್ಲಿ ಅಲ್ಲಿನ ವೈದ್ಯರುಗಳು ಸರಿಯಾಗಿ ಸ್ಪಂದಿಸದೆ ಅವರುಗಳನ್ನು ದಿನಗಟ್ಟಲೆ ಕಾಯುಸುತ್ತಿರುವುದು ಮತ್ತು ಹಲವು ಭಾರಿ ಆಸ್ಪತ್ರೆಗಳಿಗೆ ಬರಲು ಹೇಳಿ ತಪಾಸಣೆಯನ್ನು ಮಾಡದೆ ಕಳುಹಿಸುತ್ತಿರುವುದು ಕಂಡು ಬರುತ್ತಿದೆ. ಇವೆಲ್ಲವನ್ನು ತಡೆಯಲು ಈ ದಿವ್ಯಾಂಗರಿಗೆ ಸರ್ಕಾರವೆ ಒಂದು ಯೋಜನೆಯನ್ನು ರೂಪಿಸಿ ಅದಾಲತ್ ರೂಪದಲ್ಲಿ ಈ ಅಂಗವೀಕಲರ ಮನೆಗಳಿಗೆ ಗುರುತಿನ ಚೀಟಿಯನ್ನು ಮುಟ್ಟಿಸುವ ಕಾರ್ಯವನ್ನು ಮಾಡಲು ಸೂಕ್ತ ಯೋಜನೆಯನ್ನು ರೂಪಿಸುವ ಬಗ್ಗೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-

ಅಂಗವಿಕಲರಿಗೆ ಯುಡಿಐಡಿ ಕಾರ್ಡ್ ತರಿಸಲು ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗಳು, ನಿಮ್ಹಾನ್ಸ್ ಮತ್ತು ಡಿಮ್ಹಾನ್ಸ್ ಒಳಗೊಂಡಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಪ್ರಾಧಿಕಾರ (Medical Authority) ರಚಿಸಿ ದಿ:20.02.2019ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ವಿಕಲಚೇತನರ ವಿಶಿಷ್ಟ ಗುರುತಿನ ಚೀಟಿ (ಯುಡಿಐಡಿ) ತ್ವರಿತ ಅನುಷ್ಠಾನಕ್ಕಾಗಿ ಸಹಾ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರುಗಳಿಂದ ಜಂಟಿ ಸುತ್ತೋಲೆಯನ್ನು ದಿನಾಂಕ:24.08.2022 ರಂದು ಹೊರಡಿಸಲಾಗಿದೆ. ಅನುಬಂಧದಲ್ಲಿ ನೀಡಲಾಗಿದೆ.

ರಾಜ್ಯದಲ್ಲಿ ದಿ:13.02.2024ರವರೆಗೆ 7,58,470 ಯುಡಿಐಡಿ ಕಾರ್ಡ್‌ಗಳನ್ನು ವಿತರಿಸಲಾಗಿದೆ.

ಅಂಗವಿಕಲರು ಹೊಸದಾಗಿ ಯುಡಿಐಡಿ ಕಾರ್ಡ್ ಪಡೆಯಲು www.swavlambancard.gov.inPortal ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ತಮ್ಮ ವಿಳಾಸಕ್ಕೆ ಹತ್ತಿರದಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ (ಎಲ್ಲಾ ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗಳು, ನಿಮ್ಹಾನ್ಸ್ ಮತ್ತು ಡಿಮ್ಹಾನ್ಸ್ ಇತ್ಯಾದಿ) ನಿಗದಿಪಡಿಸಿದ ದಿನಾಂಕದಂದು ಆಸ್ಪತ್ರೆಗೆ ಹಾಜರಾಗಲು ತಿಳಿಸುತ್ತಾರೆ. ತದನಂತರ ಸದರಿ ಅಂಗವಿಕಲ ಅಭ್ಯರ್ಥಿಗಳು ಆ ದಿನಾಂಕದಂದು ಆಸ್ಪತ್ರೆಗೆ ಹಾಜರಾದಾಗ ತಪಾಸಣೆ ನಡೆಸಿ, ಯುಡಿಐಡಿ ಕಾರ್ಡ್‌ನೀಡಲಾಗುತ್ತಿದೆ. ವಿಳಂಬ ತಡೆಗಟ್ಟಲು ಮತ್ತೊಮ್ಮೆ ಸೂಚನೆಗಳನ್ವಯ ನೀಡಲಾಗುವುದು.

ಆಕುಕ 18 ಎಸ್‌ಬಿವಿ 2024

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು